ಅ. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಕಲ್ಯಾಣ ಮಂಟಪ ಕಟ್ಟಡಗಳಿಗೆ ಪಾಲಿಕೆಯಿಂದ ವಿಶೇಷ ಪರವಾನಗಿ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆಯೇ?

ಆ. ವಸತಿ ವಲಯಗಳಲ್ಲಿ ಜನನಿಬಿಡ ಪ್ರದೇಶಗಳಲ್ಲಿ ಯಾವುದೇ ರೀತಿಯ ವಾಹನ ಸೌಲಭ್ಯ ಇಲ್ಲದೆ ಪ್ರಾರಂಭಿಸಿರುವ ಕಲ್ಯಾಣ ಮಂಟಪಗಳಿಂದ ನಾಗರೀಕರಿಗೆ ಉಂಟಾಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

ಅ. ಹೌದು

ಆ. ವಸತಿ ವಲಯಗಳಲ್ಲಿ ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ಜೋನಿಂಗ್ ಬೈಲಾದಲ್ಲಿ ಅವಕಾಶ ವಿರುವುದಿಲ್ಲ ಮತ್ತು ವಸತಿ ವಲಯಗಳಲ್ಲಿ ಇಂತಹ ಕಟ್ಟಡಗಳನ್ನು ನಿರ್ಮಿಸಲು ನಕ್ಷೆ ಮಂಜೂರಾತಿ ನೀಡುವುದಿಲ್ಲ. ವಸತಿಯೇತರ ವಲಯದಲ್ಲಿ ಮಾತ್ರ ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ನಕ್ಷೆ ಮಂಜೂರಾತಿ ನೀಡಲಾಗುವುದು. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂ ಉಪಯೋಗ ಬದಲಾವಣೆ ಪಡೆದರೆ ಕಲ್ಯಾಣ ಮಂಟಪ ಕಟ್ಟಲು ಅನುಮತಿ ತಂದಲ್ಲಿ ಮಾತ್ರ ವಸತಿ ವಲಯದಲ್ಲಿ ಕಲ್ಯಾಣ ಮಂಟಪ ಕಟ್ಟಲು ಬೈಲಾ ಜೋನಿಂಗ್ ಅನುಬಂಧ-32 ಕಲಂ ಸಂ.11 ರ ಪ್ರಕಾರ ವಾಹನ ನಿಲುಗಡೆಗೆ ಸ್ಥಳಾವಕಾಶ ನೀಡಿದಲ್ಲಿ ನಕ್ಷೆ ಮಂಜೂರಾತಿ ನೀಡಲಾಗುವುದು.

ರಾಜ್ಯದಲ್ಲಿ ಬಸ್ಸುಗಳ ಕೊರತೆ

14 (31) ಶ್ರೀ ಡಿ.ಆರ್.ಪಾಟೀಲ್ (ಗದಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಬಸ್ಸುಗಳ ಕೊರತೆಯಿದ್ದು ಇದನ್ನು ನೀಗಿಸಲು ಸರ್ಕಾರವು ಖಾಸಗಿ ಬಸ್ಸುಗಳನ್ನು ಬಾಡಿಗೆ ಮೂಲಕ ಪಡೆಯಲು ನಿರ್ಧರಿಸಿರುವುದೇ.

2. ಹಾಗಿದ್ದಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಬಸ್ಸುಗಳನ್ನು ಖಾಸಗೀಯವರಿಂದ ಬಾಡಿಗೆಯ ಮೂಲಕ ಪಡೆದಿದೆ? ಈ ಬಗ್ಗೆ ವಿಭಾಗವಾರು ಮಾಹಿತಿಯನ್ನು ನೀಡುವುದು.?

3. ಬಾಡಿಗೆಯಿಂದ ಪಡೆದ ಬಸ್ಸುಗಳ ಬಾಡಿಗೆ ಹಣ ಡೀಸಲ್ ಹಾಗೂ ಉಳಿದ ಖರ್ಚು ವೆಚ್ಚಗಳನ್ನು ತೆಗೆದು ಇಲಾಖೆಗೆ ಆಗುವಲಾಭ ಹಾನಿ ಎಷ್ಟು?

ಶ್ರೀ ಬಿ.ರಮಾನಾಥ್ ರೈ (ಸಾರಿಗೆ ಸಚಿವರು)

1. ಹೌದು. ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳನ್ನು ತಮ್ಮ ವಾಹನ ಪಡೆಯನ್ನು ಹೆಚ್ಚಿಸಲು ಖಾಸಗಿಯವರಿಂದ ಬಸ್ಸುಗಳನ್ನು ಬಾಡಿಗೆ ಮೇಲೆ ಪಡೆಯುತ್ತಿದೆ.

2. ವಿವರಗಳು ಈ ಕೆಳಗಿನಂತಿದೆ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ	-	15 ಬಸ್ಸುಗಳು
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	-	321 ಬಸ್ಸುಗಳು
ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	-	5 ಬಸ್ಸುಗಳು
ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	-	159 ಬಸ್ಸುಗಳು

3. ಬಾಡಿಗೆ ಪಡೆದ ಖಾಸಗಿ ಬಸ್ಸುಗಳ ಕಾರ್ಯಚರಣೆಯಿಂದ ಸಂಸ್ಥೆಗಳಿಗೆ ಲಾಭವಾಗುತ್ತಿದ್ದು, ವಿವರಗಳು ಈ ಕೆಳಗಿನಂತಿದೆ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಎಪ್ರಿಲ್ ಮತ್ತು ಮೇ 2002)	-	21.71 ಲಕ್ಷಗಳು
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (2001-02ರ ಸಾಲಿನಲ್ಲಿ)	-	452.01 ಲಕ್ಷಗಳು
ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಮೇ ಮತ್ತು ಜೂನ್ 2002)	-	2.69 ಲಕ್ಷಗಳು
ಈ ಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನವೆಂಬರ್ 2001 ರಿಂದ ಮೇ 2002ರ ವರೆಗೆ)	-	93.28 ಲಕ್ಷಗಳು

ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ 33 ಕೆ.ವಿ.ಸಬ್ ಸ್ಟೇಷನ್ ಪ್ರಾರಂಭಿಸುವುದು

15 (1)- ಶ್ರೀ ಕೌಜಲಗಿ ಮಹಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲ ಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಹಾಗೂ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮದಲ್ಲಿ 33 ಕೆ.ವಿ.ಸ್ಟೇಷನ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಬಸವರಾಜ್ ಹೆಚ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಇಂತಹ ಯಾವುದೇ ಪ್ರಸಾವನೆ ಇರುವುದಿಲ್ಲ.

ಗದಗ ಜಿಲ್ಲೆಯಲ್ಲಿ ಕೆರೆಹೂಳು ತೆಗೆಯುವುದು

86 (254) ಶ್ರೀ ಪಾಟೀಲ್ ಡಿ.ಆರ್ (ಗದಗ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗದಗ ಜಿಲ್ಲೆಯ ಅತ್ಯಂತ ದೊಡ್ಡ ಹಾಗೂ ಪುರಾತನ ನೀರಾವರಿ ಕೆರೆಯಾಗಿರುವ ಹಂಬಳ ಕೆರೆಯ ಹೂಳು ತೆಗೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ. ಹಾಗಿದ್ದಲ್ಲಿ, ಹಂಬಳ ಕೆರೆ ಹೊಳೆತ್ತಲು ಆಗುವ ಅಂದಾಜು ವೆಚ್ಚ ಎಷ್ಟು;

ಇ. ಈ ಪ್ರಸ್ತಾವನೆಯನ್ನು ಕಾರ್ಯಗತ ಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಹೌದು

ಆ. ಸದರಿ ಕೆರೆ ಕಾಲುವೆ ಸುಧಾರಣೆಗೆ ವೆಚ್ಚ ರೂ. 30.00 ಲಕ್ಷ ಅಂದಾಜು ಮಾಡಲಾಗಿದೆ.

ಇ. ಪ್ರಸ್ತುತ ಸಾಲಿನಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.